18. ಅರುಣೋದಯ ಚೈತನ್ಯ ಟ್ರಸ್ಟ್, ಎಸ್‌ಆರ್‌ಕೆ ನಗರ ಪೋಸ್ಟ್, ಬೆಂಗಳೂರು–560077.

19. ಸ್ಪರ್ಶ ಟ್ರಸ್ಟ್, ಮತ್ತಿಕೆರೆ ಮೇನ್ ರಸ್ತೆ, ಬೆಂಗಳೂರು–560054.

**ಉತ್ತರ ಕನ್ನಡ ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
**ಕೊಡಗು ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
**ಹಾಸನ ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
**ಕೊಪ್ಪಳ ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
**ತುಮಕೂರು ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
**ಚಿಕ್ಕಮಗಳೂರು ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
**ಬಿಜಾಪುರ ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
**ಬಾಗಲಕೋಟೆ ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
**ದಕ್ಷಿಣ ಕನ್ನಡ ಜಿಲ್ಲೆ** – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ

## ಆದಾಯ ಜಾತಿ ಪ್ರಮಾಣ ಪತ್ರ ನೀಡಿಕೆ

**386 (679); ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)**

ಅ) ರಾಜ್ಯದಲ್ಲಿ ವಿದ್ಯಾರ್ಥಿಗಳು, ಉದ್ಯೋಗಾರ್ಥಿಗಳಿಗೆ ಆದಾಯ, ಜಾತಿ ಪ್ರಮಾಣ ಪತ್ರ ನೀಡುವ ಕುರಿತಾದ ಚಾಲನೆಯಲ್ಲಿರುವ ವ್ಯವಸ್ಥೆಯ ವಿವರಗಳೇನು;

ಆ) ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ಶಾಲೆಗಳಿಗೆ ಪ್ರಮಾಣ ಪತ್ರವನ್ನು ನೀಡುವ ವ್ಯವಸ್ಥೆಯ ಕುರಿತಾಗಿ ಕೈಗೊಂಡ ಕ್ರಮಗಳೇನು;

ಇ) ಜಾತಿ ಪ್ರಮಾಣ ಪತ್ರ ನೀಡಿಕೆಗೆ ಅನುಸರಿಸುವ ಮಾನದಂಡಗಳು ಮತ್ತು ಒದಗಿಸಿಕೊಡಬೇಕಾದ ದಾಖಲೆಗಳು ಯಾವುವು; ಶಾಲಾ ಮಕ್ಕಳು ತಮ್ಮ ಜಾತಿಯನ್ನು ಶಾಲಾ ದಾಖಲೆಯಲ್ಲಿ ನಮೂದಿಸುವ ಕುರಿತು ಅನುಸರಿಸುತ್ತಿರುವ ಕ್ರಮಗಳೇನು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ರಾಜ್ಯದಲ್ಲಿ ವಿದ್ಯಾರ್ಥಿಗಳು ಹಾಗೂ ಉದ್ಯೋಗಾರ್ಥಿಗಳಿಗೆ ಅಟಲ್‌ಜೀ ಜನಸ್ನೇಹಿ ಕೇಂದ್ರದ ಮೂಲಕ ಅರ್ಜಿಗಳನ್ನು ಪಡೆದು, ಜಾತಿ ಪ್ರಮಾಣ ಪತ್ರವನ್ನು ತಾಲ್ಲೂಕು ಕಛೇರಿಯ ತಹಶೀಲ್ದಾರರಿಂದ ಹಾಗೂ ಆದಾಯ ಪ್ರಮಾಣ ಪತ್ರವನ್ನು ನಾಡಕಛೇರಿಯ ಉಪತಹಶೀಲ್ದಾರರಿಂದ ಅನುಮೋದಿಸಿ ಅಟಲ್‌ಜೀ ಜನಸ್ನೇಹಿ ಕೆಂದ್ರದಲ್ಲಿ ವಿತರಿಸುವ ವ್ಯವಸ್ಥೆ ಜಾರಿಯಲ್ಲಿದೆ.

2014–15ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯವಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಶಾಲೆಗಳಲ್ಲಿಯೇ ವಿತರಿಸಲು ಕ್ರಮವಹಿಸಲಾಗಿದೆ.

ಆ) 2014–15ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ವಿತರಿಸಲು ಅವರುಗಳಿಂದ ಪ್ರಮಾಣ ಪತ್ರಗಳಿಗಾಗಿ ಅರ್ಜಿಯನ್ನು ಶಾಲೆಯಲ್ಲಿ ಪಡೆದು, ಸದರಿ ಅರ್ಜಿಗಳನ್ನು ನಾಡಕಛೇರಿಗಳಿಗೆ ಶಾಲಾ ಮುಖೇನ ಕಳುಹಿಸಿ ಅವುಗಳನ್ನು ಕ್ಷೇತ್ರ ಪರಿಶೀಲನೆಗೊಳಪಡಿಸಿ, ನಂತರ ಸಂಸ್ಕರಿಸಿ ಜಾತಿ ಪ್ರಮಾಣ ಪತ್ರಗಳನ್ನು ತಹಶೀಲ್ದಾರರಿಂದ ಹಾಗೂ ಆದಾಯ ಪ್ರಮಾಣ ಪತ್ರಗಳನ್ನು ನಾಡಕಛೇರಿಯ ಉಪತಹಶೀಲ್ದಾರರಿಂದ ಅನುಮೋದಿಸಿ ಲ್ಯಾಮಿನೇಷನ್ ಮಾಡಿಸಿ ಸಂಬಂಧಿಸಿದ ಶಾಲೆಗಳಿಗೆ ವಿತರಿಸುವಂತಹ ವಿಶೇಷ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿ ಕೈಗೊಳ್ಳಬೇಕಾದ ಸರಳೀಕೃತ ಕಾರ್ಯವಿಧಾನದ ಬಗ್ಗೆ ದಿನಾಂಕ: 03.02.2014 ರ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಅದರಂತೆ ವಿದ್ಯಾರ್ಥಿಗಳಿಂದ 59,14,817 ಅರ್ಜಿಗಳು ರಾಜ್ಯಾದ್ಯಂತ ಸ್ವೀಕೃತವಾಗಿದ್ದು, ಅನುಮೋದಿತ ಪ್ರಮಾಣ ಪತ್ರಗಳನ್ನು ಶಾಲೆಗಳಿಗೆ ವಿತರಿಸುವ ಕಾರ್ಯವು ಪ್ರಗತಿಯಲ್ಲಿದೆ.

ಇ) ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಂದ ಜಾತಿ ಮತ್ತು ಪ್ರಮಾಣ ಪತ್ರಗಳಿಗಾಗಿ ನೀಡುವ ಅರ್ಜಿಗಳನ್ನು ನಾಡಕಛೇರಿಗಳಲ್ಲಿ ತಂತ್ರಾಂಶದ ಮೂಲಕ ಸ್ವೀಕರಿಸಿ, ಅವುಗಳನ್ನು ನಿಯಮಾನುಸಾರ ಕ್ಷೇತ್ರ ಪರಿಶೀಲನೆಗೊಳಪಡಿಸಿ, ಅನುಮೋದಿತ ಪ್ರಮಾಣ ಪತ್ರಗಳನ್ನು ಅರ್ಜಿದಾರರಿಗೆ ವಿತರಿಸಲಾಗುತ್ತದೆ.

ಈ ಪ್ರಮಾಣ ಪತ್ರಗಳಿಗಾಗಿ ಅರ್ಜಿದಾರರು ಅವರ ಗುರುತಿಗಾಗಿ ಯಾವುದಾದರೂ ದಾಖಲೆಯನ್ನು ಮತ್ತು ಪಡಿತರ ಚೀಟಿಯನ್ನು ನೀಡಬೇಕಾಗಿದ್ದು, ಸದರಿ ದಾಖಲೆಯ ಆಧಾರದ ಮೇಲೆ ಕ್ಷೇತ್ರ ಪರಿಶೀಲನೆ ಮಾಡಲಾಗುವುದು ಹಾಗೂ ಕರ್ನಾಟಕ ಅನುಸೂಚಿತ ಜಾತಿಗಳು, ಬುಡಕಟ್ಟುಗಳು, ಹಿಂದುಳಿದ ವರ್ಗಗಳ ನೇಮಕಾತಿ, ಮೀಸಲಾತಿ, ಅಧಿನಿಯಮ 1990 ಮತ್ತು ಅದರಡಿ ರಚಿಸಲಾದ ನಿಯಮಗಳು ಮತ್ತು ತಿದ್ದುಪಡಿಗಳ (ದಿನಾಂಕ: 28.02.2009 ರಲ್ಲಿದ್ದಂತೆ) ಅನ್ವಯ ಮತ್ತು ಕಾಲಕಾಲಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಜಾರಿಯಾಗುವ ಮಾರ್ಗಸೂಚಿಗಳಂತೆ ಕ್ರಮವಹಿಸಲಾಗುವುದು.

**ಕ್ರೀಡಾಂಗಣಕ್ಕೆ ಮೂಲಭೂತ ಸೌಕರ್ಯ ಒದಗಿಸುವುದು**

**388(634); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ. (ಮಧುಗಿರಿ)**

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ರಾಜೀವ್‌ಗಾಂಧಿ ಕ್ರೀಡಾಂಗಣಕ್ಕೆ ಮೂಲಭೂತ ಸೌಲಭ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

ಆ) ಬಂದಿದ್ದಲ್ಲಿ, ಕ್ರೀಡಾಂಗಣದ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? (ವಿವರ ನೀಡುವುದು)